ಓ. ಎಸ್. ನಂ. 82-2014 ಡಿಡಬ್ಲ್ಯೂ- 1

ದಿನಾಂಕಃ 20-01-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲುಃ :ವಾದಿ ಪರವಾಗಿ ಶ್ರೀ. ಎಚ್.ಎಸ್.ಕೆ ವಕೀಲರಿಂದಃ**

3. ಸರ್ವೆ ನಂಬರ 81 ದಿಃ 05-09-1983 ರಿಂದ ನನಗೆ ಸರ್ಕಾರದಿಂದ 15 ವರ್ಷಗಳ ಕಾಲ ಯಾರಿಗೂ ಪರ ಬಾರೆ ಮಾಡಬಾರದೆಂಬ ಷರತ್ತಿನ ಮೇಲೆ ಮಂಜೂರಾಗಿದೆ ಎಂದರೆ ಸರಿ. ಮಂಜೂರಿ ಕಾಲದಲ್ಲಿ ಷದ್ರಿ ಜಮೀನಿನಲ್ಲಿ ಸಾಕಷ್ಟು ಮರಗಳು ಇದ್ದು ಎಂದರೆ ಸಾಕ್ಷಿಯು ಜಾಸ್ತಿ ಇರಲಿಲ್ಲ ಎಂದು ನುಡಿಯುತ್ತಾರೆ. ನಂದಿ ಹಾಗೂ ಕಿಂದಳ ಜಾತಿಯ ಕೆಲವು ಮರಗಳು ಇದ್ದವು. ಅಂತೆಯೇ 10 ಹಲಸಿನ ಮರಗಳು, 5 ಮಾವು, 4 ಗೋಡಂಬಿ, 1 ನಂದಿ ಮರ ಗಳು ಇದ್ದವು ಎಂದರೆ ಇದ್ದಿರಬಹುದು ಎಂದು ನುಡಿಯುತ್ತಾರೆ. ಮರಗಳನ್ನು ಸರ್ಕಾರದ ಆಸ್ತಿ ಎಂದು ಪರಿಗಣಿಸಿ ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಗೆ ಸುಮಾರು 10 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತೇನೆ. ಯಾವ ದಿನಾಂಕದಂದು ಮಾರಾಟ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಮಾರಾಟ ಮಾಡುವ ಮೊದಲು 10 ವರ್ಷಗಳ ಪರಬಾರೆ ಷರತ್ತನ್ನು ಕಡಿಮೆ ಮಾಡಿಸಿಕೊಂಡಿರುವುದಿಲ್ಲ. ಖರೀದಿ ಪತ್ರವನ್ನು ಉಪನೊಂದಾಣಧಿಕಾರಿ ಕಚೇರಿಯಲ್ಲಿ ನೊಂದಣಿ ಮಾಡಿಸಿಲ್ಲ. ಮಾರಾಟ ಮಾಡಿದ ಬಗ್ಗೆ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ. ಮಾರಾಟ ಮಾಡದೇ ಇದ್ದರೂ ಸಹ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಿಃ 04-10-1997 ರಂದು ಅಶೋಕ ಮಹಾಬಲೇಶ್ವರ ರಾಣೆ ಎಂಬುವವರಿಗೆ ಸಾಮಾನ್ಯ ಅಧಿಕಾರ ಪತ್ರವನ್ನು ಬರೆದು ಕಾರವಾರದ ರಾಮಾನಂದ ಎನ್ ನಾಯ್ಕ ಎಂಬ ನೋಟರಿರವರ ಮುಂದೆ ನೊಂದಣಿ ಮಾಡಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಷದ್ರಿ ಅವರು ವಾದಿಗೆ ನನಗೆ ಮಂಜೂರಾದ ಜಮೀನಿನಲ್ಲಿ ಇದ್ದ ಮರಗಳನ್ನು ಮಾರಾಟ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಒಪ್ಪಂದ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಷದ್ರಿ ಒಪ್ಪಂದದಂತೆ 90 ಸಾವಿರಕ್ಕೆ ಮಾರಾಟ ಮಾಡುವುದಾಗಿ ತಿಳಿಸಿ, ಆತನಿಂದ 50 ಸಾವಿರ ಹಣವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಸದ್ರಿ ಒಪ್ಪಂದ ಪತ್ರಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯು ಒಪ್ಪಂದ ಪತ್ರದ ಅನುಸಾರ ಅರಣ್ಯ ಇಲಾಖೆಗೆ ಮರಗಳನ್ನು ಕಟಾವು ಮಾಡಿಕೊಡಲು ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಗೆ ನೀಡಿದ ಪರವಾನಿಗೆಗೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 21-11-1997 ರಂದು ಅರಣ್ಯ ಇಲಾಖೆಯವರು ದಾವಾಸ್ವತ್ತಿಗೆ ಬಂದು ಸರ್ವೆ ಕಾರ್ಯವನ್ನು ನಡೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನಲ್ಲಿರುವ ಎಲ್ಲಾ ಮರಗಳನ್ನು ಅಳತೆ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ವರದಿಯಲ್ಲಿ ಒಟ್ಟು ಎಷ್ಟು ಮರಗಳು ಇದ್ದವು ಎಂದು ನಮೂದಿಸಲಾಗಿತ್ತದೆ ಎಂದರೆ ನನಗೆ ಗೊತ್ತಿಲ್ಲ. ತದನಂತರ 15 ವರ್ಷ ಪರಬಾರ ಮಾಡಬಾರದೆಂಬ ಷರತ್ತನ್ನು ಕಡಿಮೆ ಮಾಡಿಸಿಕೊಳ್ಳದೇ ಇದ್ದ ಕಾರಣ ಸದ್ರಿ ಅರ್ಜಿಯನ್ನು ಪುರಸ್ಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ವಾದಿಯು ಸದ್ರಿ ಷರತ್ತನ್ನು ಕಡಿಮೆಗೊಳಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ದಿಃ 28-05-1998 ರಂದು ಪರಬಾರೆಯ ಷರತನ್ನು ಕಡಿಮೆಗೊಳಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಈ ವಿಷಯ ನನಗೆ ತಿಳಿದಿದ್ದರೂ ಸಹ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ